● ಸಂಪುಟ 7
● ಸಂಚಿಕೆ 6
ಜುಲೈ 2010

# ಸ್ವಾಭಿಮಾನಿ ಸಹಕಾರಿ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ರೂ. 5

ವಾರ್ಷಿಕ ಚಂದಾ ರೂ 50/-

ಬೆಳಗಾವಿಯಲ್ಲಿ

## ಸೌಹಾರ್ದ ಸಹಕಾರಿ ಸಮಾವೇಶ

**ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಮೆಚ್ಚುಗೆ**
**ಕಿರು ಹಣಕಾಸು (ಮೈಕ್ರೋ ಫೈನಾನ್ಸ್) ವ್ಯವಸ್ಥೆಗೆ ಆದ್ಯತೆ ನೀಡಲು ಸಹಕಾರ ಸಚಿವರ ಕರೆ**



ಬೆಳಗಾವಿಯಲ್ಲಿ ದಿನಾಂಕ 8-6-2010 ರಂದು ಹಿಂದವಾಡಿಯ ಗೋಮಟೇಶ ಕಾಲೇಜಿನ ಆವರಣದಲ್ಲಿ ಹಮ್ಮಿಕೊಂಡಿದ್ದ ಸೌಹಾರ್ದ ಸಹಕಾರಿಗಳ ಬೃಹತ ಸಮಾವೇಶ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದಶಮಾನೋತ್ಸವ ಕಾರ್ಯಕ್ರಮಗಳನ್ನು ರಾಜ್ಯದ ಮುಖ್ಯಮಂತ್ರಿ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿ ರಾಜ್ಯದಲ್ಲಿ ಕೇವಲ ಹತ್ತು ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮ ಸಾಧನೆ ಮಾಡಿದೆ. ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಕ್ಷೇತ್ರದ ಸಹಕಾರಿಗಳು ಮಾಡಿರುವ ಸಾಧನೆಗೆ ನಾನು ಅವರನ್ನು ಅಭಿನಂದಿಸುತ್ತೇನೆ ಎಂದರಲ್ಲದೆ ಸಹಕಾರ ಕ್ಷೇತ್ರ ಈ ದೇಶದಲ್ಲಿ ಉತ್ತಮ ಸಾಧನೆಮಾಡಿದೆ. ದಶಮಾನೋತ್ಸವವನ್ನು ಆಚರಿಸಿ ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಈ ವ್ಯವಸ್ಥೆಯಿಂದ ಆರ್ಥಿಕ ನೆರವು ದೊರಕಿಸಲು ಪ್ರಯತ್ನಿಸಿದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸಲು ಸಹಕಾರಿಗಳಿಗೆ ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರು ಮಾತನಾಡುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳು ಸರಕಾರದ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿರುವುದು ಬಹಳ ಸಂತೋಷದ ವಿಷಯ. ಸ್ವಾಯತ್ತತೆ ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣವನ್ನು ಧ್ಯೇಯವನ್ನಾಗಿರಿಸಿಕೊಂಡಿರುವ ಈ ಸಹಕಾರಿ ಸಂಸ್ಥೆಗಳು ಸ್ವಾಯತ್ತತೆಯನ್ನು ಸ್ವೇಚ್ಛಾಚಾರವಾಗಿ ಮಾಡಿಕೊಂಡು ಮನಸ್ಸಿಗೆ ಬಂದ ಹಾಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಅಗತ್ಯಕ್ಕಿಂತ ಹೆಚ್ಚು ಶಾಖೆಗಳನ್ನು ತೆರೆಯುವುದು ಸರಿಯಲ್ಲ. ಈ ಪ್ರವೃತ್ತಿ ಮುಂದುವರಿಯದ ಹಾಗೆ ಸಹಕಾರಿಗಳು ಕಾರ್ಯನಿರ್ವಹಿಸಲು ಕಿವಿಮಾತು ಹೇಳಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಜ್ಯದ ಜಲ ಸಂಪನ್ಮೂಲ ಸಚಿವ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಬಸವರಾಜ ಬೊಮ್ಮಾಯಿಯವರು "ಇ" ಸ್ಟಾಂಪಿಂಗ್ ಕಾಗದಗಳನ್ನು ವಿತರಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ "ಇ" ಸ್ಟಾಂಪಿಂಗ್ ಶತ ಕೇಂದ್ರಗಳ ಕಾರ್ಯ ನಿರ್ವಹಣೆಯನ್ನು ಘೋಷಣೆ ಮಾಡಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ತೋಟಗಾರಿಕಾ ಸಚಿವ ಶ್ರೀ ಉಮೇಶ ಕತ್ತಿ, ಕೈಗಾರಿಕಾ ಸಚಿವ ಶ್ರೀ ಮುರುಗೇಶ ನಿರಾಣಿ, ಸಂಸದ ಶ್ರೀ ಸುರೇಶ ಅಂಗಡಿ, ಶಾಸಕ ಶ್ರೀ ಸಂಜಯ ಪಾಟೀಲ್, ವಿಧಾನ ಪರಿಷತ್ ಸದಸ್ಯ ಶ್ರೀ ಮಹಾಂತೇಶ ಕವಟಗಿಮಠ್, ಮುಂಬೈ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯ ಉಪಾಧ್ಯಕ್ಷ ಶ್ರೀ ಶ್ರೀಕಾಂತ್, ಕರ್ನಾಟಕ ಪ್ರಾಂತೀಯ ವ್ಯವಸ್ಥಾಪಕ ಶ್ರೀ ರವಿಕುಮಾರ ಹಾಗೂ ಅಧಿಕಾರಿಗಳು ಬೆಳಗಾವಿ ವಿಭಾಗದ ಜಂಟಿ ನಿಬಂಧಕ ಶ್ರೀ ಮಹಪತಿ ಕೇಂದ್ರ ಕಛೇರಿಯ ನಿಬಂಧಕ ಶ್ರೀ ಭೀಮಸೇನ ಬಂಕದ, ಬೆಳಗಾವಿ ಉಪನಿಬಂಧಕ ಶ್ರೀ ಪಾಟೀಲ್ ಮುಂತಾದ ಅಧಿಕಾರಿಗಳು ಹಾಗೂ ಅನೇಕ ಸಹಕಾರ ಗಣ್ಯರು ಹಾಗೂ 1200ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿದ್ದರು.

3ನೇ ಪುಟಕ್ಕೆ...

## ಹೆಮ್ಮೆಯ ಸಮಾವೇಶ; ಹೆಚ್ಚಿದ ವಿಶ್ವಾಸಾರ್ಹತೆ

ಅಧ್ಯಕ್ಷರ ನುಡಿ...........



ಬೆಳಗಾವಿಯಲ್ಲಿ ದಿನಾಂಕ 8-6-2010 ರಂದು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಸೌಹಾರ್ದ ಸಹಕಾರಿಗಳ ಬೃಹತ್ ಸಮಾವೇಶ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದಶಮಾನೋತ್ಸವವನ್ನು ಉದ್ಘಾಟಿಸುವುದರ ಮೂಲಕ ಸೌಹಾರ್ದ ಸಹಕಾರಿಗಳ ಕಾರ್ಯ ವಿಧಾನದ ಬಗ್ಗೆ ಸಂತೋಷ ವ್ಯಕ್ತಪಡಿಸುವುದರ ಮೂಲಕ ವಿಶ್ವಾಸಾರ್ಹತೆಯನ್ನು ಮೆಚ್ಚಿಕೊಂಡಿದ್ದಾರೆ. ಸೌಹಾರ್ದ ಸಹಕಾರಿಗಳಿಗೆ ಇದೊಂದು ಹೆಮ್ಮೆಯ ಸಮಾವೇಶ. ಸಾರ್ವಜನಿಕರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವದ ಬಗ್ಗೆ ಕಾರ್ಯಚಟುವಟಿಕೆಯ ಬಗ್ಗೆ ಹೆಚ್ಚಿನ ಪ್ರಚಾರವನ್ನು ಮಾಡಲು ದೊರಕಿದ ಅವಕಾಶ.

ಸೌಹಾರ್ದ ಸಹಕಾರಿಗಳ ಈ ಸಮಾವೇಶದ ಮತ್ತೊಂದು ಗಮನಾರ್ಹ ಅಂಶವೆಂದರೆ ಸರಕಾರದ ಮುಖ್ಯಮಂತ್ರಿಗಳ ಜೊತೆಗೆ ಸಂಪುಟ ಸಚಿವರುಗಳಾದ ಸಹಕಾರ ಸಚಿವ, ಶ್ರೀ ಲಕ್ಷ್ಮಣ ಸವದಿ, ಲೋಕೋಪಯೋಗಿ ಸಚಿವ ಶ್ರೀ ಸಿ.ಎಮ್.ಉದಾಸಿ, ತೋಟಗಾರಿಕಾ ಸಚಿವ ಶ್ರೀ ಉಮೇಶ ಕತ್ತಿ, ಕೈಗಾರಿಕಾ ಸಚಿವ ಶ್ರೀ ಮುರುಗೇಶ ನಿರಾಣಿ, ಜಲ ಸಂಪನ್ಮೂಲ ಸಚಿವ ಶ್ರೀ ಬಸವರಾಜ ಬೊಮ್ಮಾಯಿ, ಸಂಸದ ಶ್ರೀ ಸುರೇಶ ಅಂಗಡಿ, ಶಾಸಕ ಶ್ರೀಸಂಜಯ ಪಾಟೀಲ್, ಶಾಸಕ ಶ್ರೀ ಕವಟಗಿಮಠ್ ಮುಂತಾದ ಗಣ್ಯರುಗಳಲ್ಲದೆ ಬೆಳಗಾವಿ ವಿಭಾಗದ 1200ಕ್ಕೂ ಹೆಚ್ಚು ಸಹಕಾರಿ ಗಣ್ಯರು ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಗರಿ ಮೂಡಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ಮಾನ್ಯ ಮುಖ್ಯಮಂತ್ರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯ ಚಟುವಟಿಕೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸುವುದರ ಜೊತೆಗೆ ಸೌಹಾರ್ದ ಸಹಕಾರಿಗಳು ಕಿರು ಹಣಕಾಸು ವ್ಯವಸ್ಥೆಯನ್ನು ಜಾರಿಗೊಳಿಸಲು ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸೌಹಾರ್ದ ಸಹಕಾರಿ ಕ್ಷೇತ್ರ ಆರ್ಥಿಕ ನೆರವು ನೀಡಲು ಕರೆಕೊಟ್ಟಿದ್ದಾರೆ. ಈ ಬಗ್ಗೆ ಮುಂಬರುವ

2ನೇ ಪುಟಕ್ಕೆ...

ಅಧ್ಯಕ್ಷರ ನುಡಿ.....................

...1ನೇ ಪುಟದಿಂದ

# ಹೆಮ್ಮೆಯ ಸಮಾವೇಶ; ಹೆಚ್ಚಿದ ವಿಶ್ವಾಸಾರ್ಹತೆ

ದಿನಗಳಲ್ಲಿ ಸೌಹಾರ್ದ ಸಹಕಾರಿಗಳು ಚಿಂತನೆ ನಡೆಸಿ ಕಾರ್ಯಕ್ರಮ ರೂಪಿಸಬೇಕು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಹಕಾರ ಸಚಿವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿ ಹೆಚ್ಚಿನ ಆರ್ಥಿಕ ಚಟುವಟಿಕೆಯನ್ನು ನೀಡುವುದಕ್ಕಾಗಿ "ಇ"ಸ್ಟಾಂಪಿಂಗ್ ವ್ಯವಸ್ಥೆಯನ್ನು ಪ್ರಪ್ರಥಮವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಒದಗಿಸಿದೆ. ಸ್ವಾಯತ್ತತೆ ಸ್ವೇಚ್ಛಾಚಾರವಾಗಬಾರದು ಅವಕಾಶವನ್ನು ಸದುಪಯೋಗಮಾಡಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ನೀಡುವುದರಲ್ಲಿ ಸೌಹಾರ್ದ ಸಹಕಾರಿಗಳು ಮುಂದಾಗಬೇಕೆಂದು ಕಿವಿಮಾತು ಹೇಳಿದ್ದಾರೆ. ಸೌಹಾರ್ದ ಸಹಕಾರಿಗಳು ಇದೊಂದು ಎಚ್ಚರಿಕೆಯೆಂದು ಮತ್ತು ಗಂಭೀರವಾಗಿ ಪರಿಗಣಿಸಿ ಕಾರ್ಯನಿರ್ವಹಿಸಬೇಕು.

ಸೌಹಾರ್ದ ಸಹಕಾರಿಗಳ ಸಂಖ್ಯೆ ಬೆಳಗಾವಿ ವಿಭಾಗದಲ್ಲಿ ಹೆಚ್ಚಿರುವುದನ್ನು ಗಮನಿಸಿ ಆ ಭಾಗದ ಸಹಕಾರಿಗಳ ಬೇಡಿಕೆಯ ಮೇರೆಗೆ ವಿಭಾಗೀಯ ಕಛೇರಿಯನ್ನು ಪ್ರಾರಂಭಿಸಲಾಗಿದೆ, ಬೆಳಗಾವಿ ವಿಭಾಗದ ಸಹಕಾರಿಗಳು ಈ ಕಛೇರಿಯ ಸದುಪಯೋಗ ಮಾಡಿಕೊಳ್ಳಬೇಕು. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ವೇಗವನ್ನು ಒದಗಿಸಲು ಸಂಯುಕ್ತ ಸಹಕಾರಿಯ ಈ ಪ್ರಯತ್ನ ಯಶಸ್ವಿಯಾಗಬೇಕು. ಮುಂಬರುವ ದಿನಗಳಲ್ಲಿ ಗುಲ್ಬರ್ಗಾ ಹಾಗೂ ಮೈಸೂರು ವಿಭಾಗಗಳಲ್ಲೂ ಇದೇ ಮಾದರಿಯ ವಿಭಾಗೀಯ ಕಛೇರಿಗಳನ್ನು ಪ್ರಾರಂಭೀಸಲು ಪೂರಕವಾಗಬೇಕು.

ಇದೇ ಸಂದರ್ಭದಲ್ಲಿ ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ, ಸೌಹಾರ್ದಸಹಕಾರಿಗಳ ಮೂಲಕ ಆರ್.ಟಿ.ಸಿ ಸೀನಿಯರ್ ಸಿಟಿಝನ್ ಕಾರ್ಡ, ಥರ್ಡ ಪಾರ್ಟಿ ಚೆಕ್ ಕಲೆಕ್ಷನ್ ಮಾಡುವುದು, ಮೈಕ್ರೋ ಫೈನಾನ್ಸ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದು. ಸಂಯುಕ್ತ ಸಹಕಾರಿಗೆ ಬೆಂಗಳೂರಿನಲ್ಲಿ ಹಾಗೂ ಬೆಳಗಾವಿಯಲ್ಲಿ ನಿವೇಶನಗಳಿಗಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಸೌಹಾರ್ದಯುತವಾಗಿ ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸುವುದಾಗಿ ತಿಳಿಸಿದ್ದಾರೆ.

ಒಟ್ಟಾರೆ ಈ ಸಮಾವೇಶ ಸೌಹಾರ್ದ ಸಹಕಾರಿಗಳಿಗೆ ತಮ್ಮ ಕೆಲಸಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಸರಕಾರ ಸಂಪೂರ್ಣವಾಗಿ ನಮ್ಮ ಕೆಲಸ ಕಾರ್ಯಗಳನ್ನು ಮೆಚ್ಚಿಕೊಂಡಿದೆ. ಸಾರ್ವಜನಿಕರಲ್ಲಿ ಈ ಕ್ಷೇತ್ರದ ಬಗ್ಗೆ ಅಪಾರ ವಿಶ್ವಾಸಮೂಡಿಸಲು ಸಾಧ್ಯವಾಗಿದೆ. ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಉತ್ಸಾಹ ಮೂಡಿದೆ. ಈ ಉತ್ಸಾಹ ನಿರಂತರವಾಗಿ ತಮ್ಮಲ್ಲಿರಲಿ.ರಾಜ್ಯದ ಎಲ್ಲ ಸಹಕಾರಿಗಳು ದಶಮಾನೋತ್ಸವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಆಚರಿಸಲು ಸನ್ನದ್ಧರಾಗಿ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು

## ನೂತನ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರ ಸ್ವೀಕಾರ



ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಶರಣ ಗೌಡ ಪಾಟೀಲ ಅವರು ಶ್ರೀ ನಾರಾಯಣ ಹೆಗಡೆ ಅವರಿಂದ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರ ಅವರಿಂದ ಅಭಿನಂದನೆ

## "ಇ" ಸ್ಟಾಂಪಿಂಗ ವ್ಯವಹಾರ ನಿಯಮಗಳ ಉಲ್ಲಂಘನೆ; ಅನುಮತಿ ರದ್ದು

ಬೆಳಗಾವಿಯ ಲಿಬರಲ್ ಕ್ರೆಡಿಟ್ ಸೌಹಾರ್ದ ಸಹಕಾರಿಯು ಘಟಪ್ರಭ " ಇ " ಸ್ಟಾಂಪಿಂಗ ವ್ಯವಹಾರ ನಡೆಸಲು ಅನುಮತಿ ಪಡೆದು ನಿಯಮಗಳ ಉಲ್ಲಂಘನೆ ಮಾಡಿ ಬೆಳಗಾವಿ ನಗರದಲ್ಲಿ "ಇ" ಸ್ಟಾಂಪಿಂಗ್ ವ್ಯವಹಾರವನ್ನು ಮಾಡುತ್ತಿರುವುದನ್ನು ಹಾಗೂ ಒಬ್ಬರ ಹೆಸರಿನಲ್ಲಿರುವ ಐ.ಡಿ.ಯನ್ನು ಪಡೆದು ಅದನ್ನು ಬೇರೆಯವರು ಉಪಯೋಗಿಸುತ್ತಿರುವುದನ್ನು ಗಮನಿಸಿದ ಸ್ಟಾಕ್ ಹೋಲ್ಡಿಂಗ ಕಾರ್ಪೋರೇಶನ್ ಆಫ್ ಇಂಡಿಯಾದವರು ಈ ಸಹಕಾರಿಯ "ಇ" ಸ್ಟಾಂಪಿಂಗ್ ವ್ಯವಹಾರದ ಅನುಮತಿಯನ್ನು ರದ್ದುಪಡಿಸಿದ್ದಾರೆ.

ರಾಜ್ಯದಲ್ಲಿ 25 ಜಿಲ್ಲೆಗಳಲ್ಲಿ 79 ತಾಲ್ಲೂಕುಗಳಲ್ಲಿ 192 ಕೇಂದ್ರಗಳಲ್ಲಿ "ಇ" ಸ್ಟಾಂಪಿಂಗ ವ್ಯವಹಾರ ಪ್ರಾರಂಭವಾಗಿದೆ. ಇನ್ನು ಕೆಲವೆ ದಿನಗಳಲ್ಲಿ ಈ ಸಂಖ್ಯೆ 200 ರ ಗಡಿ ದಾಟಲಿದೆ. ರಾಜ್ಯದ ಜನತೆ ಹಾಗೂ ರಾಜ್ಯ ಸರ್ಕಾರ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಹೊಂದಿರುವ ವಿಶ್ವಾಸದಲ್ಲಿ ಕೊರತೆಯಾಗದಂತೆ ಕಾರ್ಯನಿರ್ವಹಿಸುವುದು ನಿಮ್ಮ ಜವಾಬ್ದಾರಿ. ಆದ್ದರಿಂದ "ಇ" ಸ್ಟಾಂಪಿಂಗ್ ವ್ಯವಹಾರ ನಡೆಸುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು "ಇ" ಸ್ಟಾಂಪಿಂಗ್ ಸಂಬಂಧಿಸಿದಂತೆ ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಉತ್ತಮವಾಗಿ ಕಾರ್ಯನಿರ್ವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಗೌರವಕ್ಕೆ ಧಕ್ಕೆ ಬಾರದಂತೆ ಕಾರ್ಯನಿರ್ವಹಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ವಿನಂತಿಸುತ್ತದೆ.

## ಪ್ರಗತಿ ಪಥದಲ್ಲಿ ಬೆಂಗಳೂರಿನ ಶ್ರೀ ಕಾವೇರಿ ಸೌಹಾರ್ದ ಪತ್ತಿನ ಸಹಕಾರಿ

ಬೆಂಗಳೂರಿನ ವಸಂತನಗರದ ಕೊಡವ ಸಮಾಜದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕಾವೇರಿ ಸೌಹಾರ್ದ ಪತ್ತಿನ ಸಹಕಾರಿಯು 2003ರಲ್ಲಿ ನೊಂದಣೆಯಾಗಿ ಕಳೆದ 7 ವರ್ಷಗಳಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರದ ವಿಶೇಷ ಅನುಭವವಿರುವ ಶ್ರೀ ಕೆ.ಪಿ.ಅಪ್ಪಣ್ಣ ಅವರ ಅಧ್ಯಕ್ಷತೆಯಲ್ಲಿ ಕೇವಲ 1984ರಲ್ಲಿ ಜನ ಸದಸ್ಯರಿಂದ ರೂ. 21,83,000 ಶೇರು ಬಂಡವಾಳದೊಂದಿಗೆ ಪ್ರಾರಂಭವಾದ ಈ ಸಹಕಾರಿಯು ಹಾಲಿ 2978 ಸದಸ್ಯರನ್ನು ಹೊಂದಿದ್ದು 7998000 ರೂಗಳ ಶೇರು ಬಂಡವಾಳ, 7940001 ರೂಗಳ ಠೇವಣಿ, 11675000 ರೂಗಳ ಸಾಲ ನೀಡಿದೆ. 1409.98 ಲಕ್ಷ ರೂಗಳ ನಿವ್ವಳ ಲಾಭವಾಗಿದ್ದು ಶೇರುದಾರರಿಗೆ 10% ಡಿವಿಡೆಂಡ್ ನೀಡಲಾಗಿದೆ.

ಸಹಕಾರಿಯಲ್ಲಿ ಮನೆಕಟ್ಟಲು ಸಾಲ, ವ್ಯಯಕ್ತಿಕ ಸಾಲ, ವ್ಯಾಪಾರ ಸಾಲ, ಮದುವೆ ಸಾಲ, ವಿದ್ಯಾಭ್ಯಾಸಕ್ಕಾಗಿ ಸಾಲ ವಾಹನ ಸಾಲ, ಈ ರೀತಿಯಾಗಿ ಹಲವಾರು ವಿಧವಾಗಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಸಹಕಾರಿಯ ಆಡಳಿತ ಮಂಡಳಿಯಲ್ಲಿ ಶ್ರೀ ಸಿ.ಎ.ಮಾದಪ್ಪ ಅಧ್ಯಕ್ಷರು, ಶ್ರೀ ಸಿ.ಎನ್.ಗಣೇಶ, ಉಪಾಧ್ಯಕ್ಷರು ನಿರ್ದೇಶಕರಾಗಿ ಶ್ರೀ ಕೆ.ಪಿ.ಅಪ್ಪಣ್ಣ,
ಶ್ರೀ ಎಮ್.ಎಸ್.ಮಂದಣ್ಣ,
ಶ್ರೀ ಕೆ.ಎ.ಕೆಂಚಪ್ಪ,ಶ್ರೀ ಡಿ.ಯು.ಚಂಗಪ್ಪ,
ಶ್ರೀ ಸಿ.ಎಮ್.ಸುಬ್ಬಯ್ಯ, ಬಿ.ಎ.ಮಾಚಯ್ಯ,
ಶ್ರೀ ಪಿ.ಕೆ ಮುದ್ದಪ್ಪ, ಶ್ರೀ ಕೆ.ಬಿ.ದೇವಯ್ಯ,
ಶ್ರೀ ಎಮ್.ಬಿ.ಚಂಗಪ್ಪ, ಶ್ರೀ ಪಿ.ಎಸ್.ಸುಧೀರ,
ಶ್ರೀ ಎಮ್.ಡಿ.ಬೋಳ್ಳಮ್ಮ, ಶ್ರೀ ಐ. ವನಿತಾ,
ವಿಶೇಷ ಆಹ್ವಾನಿತರಾಗಿ– ಶ್ರೀ ಕೆ.ಬಿ.ಮಾದಪ್ಪ
ಶ್ರೀಮತಿ ಸರೋಜ ನಂಜಪ್ಪ, ಸಿಬ್ಬಂದಿ ವರ್ಗದಲ್ಲಿ –
ಶ್ರೀ ಸಿ.ಕೆ.ಪೂನ್ನಪ್ಪ, ಶ್ರೀಮತಿ ಕೆ.ಬಿ.ಸರಸ್ವತಿ,
ಶ್ರೀಮತಿ ಸಿ.ಕೆ.ಜಮುನ ಕಾರ್ಯ ನಿರ್ವಹಿಸುತ್ತಿದ್ದಾರೆ.

# "ಇ" ಸ್ಟಾಂಪಿಂಗ ಶತ ಕೇಂದ್ರಗಳ ಪ್ರಾರಂಭದ ಘೋಷಣೆ



ಸಮಾರಂಭದಲ್ಲಿ ತೋಟಗಾರಿಕಾ ಸಚಿವ ಶ್ರೀಉಮೇಶ ಕತ್ತಿ, ಕೈಗಾರಿಕಾ ಸಚಿವ ಶ್ರೀಮುರುಗೇಶ ನಿರಾಣಿ, ಸಂಸದ ಶ್ರೀ ಸುರೇಶ ಅಂಗಡಿ, ಶಾಸಕ ಶ್ರೀ ಸಂಜಯ ಪಾಟೀಲ್, ವಿಧಾನ ಪರಿಷತ್ ಸದಸ್ಯ ಶ್ರೀ ಮಹಾಂತೇಶ ಕವಟಗಿಮಠ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯ ಮುಂಬೈದ ಉಪಾಧ್ಯಕ್ಷ ಶ್ರೀ ಶ್ರೀಕಾಂತ, ಕರ್ನಾಟಕ ಪ್ರಾಂತೀಯ ವ್ಯವಸ್ಥಾಪಕ ಶ್ರೀ ರವಿಕುಮಾರ ಹಾಗೂ ಅಧಿಕಾರಿಗಳು, ಬೆಳಗಾವಿ ವಿಭಾಗದ ಜಂಟಿ ನಿಬಂಧಕ ಶ್ರೀ ಮಠಪತಿ, ಕೇಂದ್ರ ಕಛೇರಿಯ ನಿಬಂಧಕ ಶ್ರೀ ಭೀಮಸೇನ ಬಂಕರ, ಬೆಳಗಾವಿ ಉಪನಿಬಂಧಕ ಶ್ರೀ ಪಾಟೀಲ್ ಮುಂತಾದವರು ವೇದಿಕೆಯಲ್ಲಿದ್ದರು.

## ಬೆಳಗಾವಿ ವಿಭಾಗದ ಉತ್ತಮ ಸೌಹಾರ್ದ ಸಹಕಾರಿ ಬಸವೇಶ್ವರ ಸೌಹಾರ್ದ ಸಹಕಾರಿ ನಿ ಸಂಕೇಶ್ವರಕ್ಕೆ ಸನ್ಮಾನ

ಸಮಾರಂಭದಲ್ಲಿ ಈ ವಿಭಾಗದ ಉತ್ತಮ ಸೌಹಾರ್ದ ಸಹಕಾರಿ ಯೆಂದು ಗುರುತಿಸಿ ಬೆಳಗಾವಿ ವಿಭಾಗದ ಚಿಕ್ಕೋಡಿ ತಾಲ್ಲೂಕಿನ ಅನೇಕ ವಿಶೇಷತೆಗಳನ್ನು ಮೈಗೂಡಿಸಿಕೊಂಡಿರುವ ಸಂಕೇಶ್ವರದ ಬಸವೇಶ್ವರ ಸೌಹಾರ್ದ ಸಹಕಾರಿಯನ್ನು ಸನ್ಮಾನಿಸಲಾಯಿತು. ಸಹಕಾರಿಯ ಪರವಾಗಿ ಸಹಕಾರಿಯ ಅಧ್ಯಕ್ಷ ಶ್ರೀ ಮಗದುಂ ಅವರನ್ನು ಹಾರಹಾಕಿ ಶಾಲು ಹೊದಿಸಿ ಫಲತಾಂಬೂಲ ಹಾಗೂ ನೆನಪಿನ ಕಾಣಿಕೆ ನೀಡಿ ಸತ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಪ್ಪಾಸಾಹೇಬ ದೇಸಾಯಿಯವರು ಉಪಸ್ಥಿತರಿದ್ದರು.






## ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿ ಅಧ್ಯಕ್ಷರಿಂದ ಮುಖ್ಯ ಮಂತ್ರಿಗಳಿಗೆ ಮನವಿ

ಇದೇ ಸಂದರ್ಭದಲ್ಲಿ ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ, ಸೌಹಾರ್ದ ಸಹಕಾರಿಗಳ ಮೂಲಕ ಆರ್.ಟಿ.ಸಿ ಸೀನಿಯರ್ ಸಿಟಿಝನ್ ಕಾರ್ಡ,ಥರ್ಡ ಪಾರ್ಟಿ ಚೆಕ್ ಕಲೆಕ್ಷನ್ ಮಾಡುವುದು, ಮೈಕ್ರೋ ಫೈನಾನ್ಸ್ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದು. ಸಂಯುಕ್ತ ಸಹಕಾರಿಗೆ ಬೆಂಗಳೂರಿನಲ್ಲಿ ಹಾಗೂ ಬೆಳಗಾವಿಯಲ್ಲಿ ನಿವೇಶನಗಳಿಗಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸುವುದಾಗಿ ತಿಳಿಸಿದರು.



## ಸಂಸ್ಥಾಪಕ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಶ್ರೀ ಮನೋಹರ ಮಸ್ಕಿ ಹಾಗೂ ಮಾಜಿ ಅಧ್ಯಕ್ಷ ಶ್ರೀ ವಿಶ್ವನಾಥ ಚ. ಹಿರೇಮಠರವರುಗಳಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿ ಹಾಗೂ ಮಾಜಿ ಅಧ್ಯಕ್ಷ ಶ್ರೀ ವಿಶ್ವನಾಥ ಚ. ಹಿರೇಮಠ ಅವರುಗಳನ್ನು ಸನ್ಮಾನಿಸಲಾಯಿತು. ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರು ಶ್ರೀಯುತರುಗಳಿಗೆ ಶಾಲು ಹೊದಿಸಿ ಹಾರ ಹಾಕಿ ಸನ್ಮಾನಿಸಿದರು.





ಮುಖ್ಯಮಂತ್ರಿಗಳಿಗೆ ಸನ್ಮಾನ



ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರಿಗೆ ಸನ್ಮಾನ



## ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿ ಉದ್ಘಾಟನೆ

ಬೆಳಗಾವಿಯ ಶೇರಿಗಲ್ಲಿಯಲ್ಲಿ ಶನಿ ದೇವಸ್ಥಾನದ ಹತ್ತಿರ ಹುಯಿಲಗೋಳ್‌ನಲ್ಲಿ ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯನ್ನು ಕರ್ನಾಟಕ ಸರಕಾರದ ಲೋಕೋಪಯೋಗಿ ಸಚಿವ ಶ್ರೀ ಸಿ.ಎಮ್.ಉದಾಸಿಯವರು ಉದ್ಘಾಟಿಸಿ ಶುಭ ಕೋರಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರು ವಹಿಸಿದ್ದರು. ಸಮಾರಂಭದಲ್ಲಿ ಮಹಾಮಂಡಳದ ಎಲ್ಲ ನಿರ್ದೇಶಕರು, ಸಹಕಾರಿ ಗಣ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.



ಬೆಳಗಾವಿ ವಿಭಾಗೀಯ ಕಛೇರಿಯ ಮುಂಭಾಗದಲ್ಲಿ ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿ ಹಾಗೂ ಲೋಕೋಪಯೋಗಿ ಸಚಿವ ಶ್ರೀ ಸಿ.ಎಂ. ಉದಾಸಿಯವರೊಂದಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು.



## ಆದರ್ಶ ಸೌಹಾರ್ದ ಸಹಕಾರಿ, ಶಿರಸಿ

"ಇ" ಸ್ಟಾಂಪಿಂಗ ವ್ಯವಹಾರ ಉದ್ಘಾಟನೆಯನ್ನು, ಸಚಿವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉದ್ಘಾಟಿಸಿದರು.



ಬೆಳಗಾವಿಯಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಬೃಹತ ಸಮಾವೇಶ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು

# ವಿವಿಧ ಸಹಕಾರಿಯಲ್ಲಿ "ಇ"ಸ್ಟ್ಯಾಂಪಿಂಗ್ ಉದ್ಘಾಟನೆ ಛಾಯಾಚಿತ್ರಗಳು

## ಶ್ರೀ ಅರಿಹಂತ ಸೌಹಾರ್ದ ಸಹಕಾರಿ

ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯವರು ಉದ್ಘಾಟಿಸುತ್ತಿರುವ ಚಿತ್ರದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ರಾವ್ ಸಾಹೇಬ ಪಾಟೀಲ ಮುಂತಾದವರಿದ್ದಾರೆ.





## ಶಿವಮೊಗ್ಗದ ಸಮೃದ್ಧ ಸೌಹಾರ್ದ ವಿವಿಧೋದ್ದೇಶ ಸಹಕಾರಿ

ರಾಜ್ಯ ಸಭಾ ಸದಸ್ಯ ಶ್ರೀ ಆಯನೂರು ಮಂಜುನಾಥರವರಿಂದ ಉದ್ಘಾಟನೆಗೊಂಡಿತು. ಚಿತ್ರದಲ್ಲಿ ಜಿಲ್ಲಾ ಪಂಚಾಯತ ಅಧ್ಯಕ್ಷ ಶ್ರೀ ಹೆಚ್.ಸಿ.ಬಸವರಾಜಪ್ಪ, ನಗರ ಸಭಾ ಅಧ್ಯಕ್ಷ ಶ್ರೀ ಎಸ್.ಕೆ. ರಾಜಶೇಖರ್, ಎ.ಪಿ.ಎಮ್.ಸಿ ಅಧ್ಯಕ್ಷ ಶ್ರೀ ಆಯನೂರು ಶಿವಾನಂದಪ್ಪ, ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಹಕ್ರೆ, ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ಬಸವರಾಜಪ್ಪ ಮತ್ತು ಆಡಳಿತ ಮಂಡಳಿ ಸದಸ್ಯರುಗಳು ಇದ್ದಾರೆ.

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್, ಚಿತ್ರದುರ್ಗ

ದಿನಾಂಕ 17-06-2010 ರಂದು ನಡೆದ "ಇ" ಸ್ಟ್ಯಾಂಪಿಂಗ್ ವ್ಯವಹಾರ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಶ್ರೀ ರಂಗಸ್ವಾಮಿಯವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ವಹಿಸಿದ್ದರು.





## ಕೊಳ್ಳೇಗಾಲದ ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ

ಕೊಳ್ಳೇಗಾಲದ ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ "ಇ"ಸ್ಟ್ಯಾಂಪಿಂಗ್ ಉದ್ಘಾಟನೆಯನ್ನು ಉಪವಿಭಾಗಾಧಿಕಾರಿ ಶ್ರೀ ಸಿದ್ಧರಾಜುರವರು ನೆರವೇರಿಸಿದರು. ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಎನ್. ಶ್ರೀನಿವಾಸ ಗುಪ್ತ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಕೆ.ವಿ. ಶ್ರೀನಿವಾಸ್ ಗುಪ್ತ, ಶ್ರೀ ಅನಂತ ಮಂಜುನಾಥ, ಶ್ರೀ ಆರ್.ವಿನೋದ ಗುಪ್ತ, ಶ್ರೀ ಎಲ್. ಶ್ರೀನಿವಾಸಮೂರ್ತಿ, ಶ್ರೀ ರಾಜೇಶ, ಶ್ರೀ ಎ.ಸಿ.ರಾಜೇಶ, ಶ್ರೀ ಟಿ.ಮಲ್ಲಿಕಾರ್ಜುನ, ಶ್ರೀ ಎಮ್.ಪಿ.ಪಾಟೀಲ್ ಮುಂತಾದವರಿದ್ದರು.

## ಕೆಮ್ಮಣ್ಣುಗುಂಡಿ ವಿಶೇಷ ತರಬೇತಿ ಕಾರ್ಯಕ್ರಮದ ಛಾಯಾಚಿತ್ರಗಳು



ಕೆಮ್ಮಣ್ಣುಗುಂಡಿಯಲ್ಲಿ ನಡೆದ 10 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಶ್ರೀ ರಾಮಸ್ವಾಮಿ, ಸಂಯುಕ್ತ ಮಹಾ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶ್ ಚಂದ್ರ, ನಿರ್ದೇಶಕ ಶ್ರೀ ಹೆಚ್.ಎಸ್. ವಿಶ್ವನಾಥ್, ಶ್ರೀ ಭಾಸ್ಕರ ಹೆಗ್ಗಡೆ ಕಾರ್ಕಳ, ಚಿಕ್ಕಮಗಳೂರು ಜಿಲ್ಲಾ ಯೂನಿಯನ್ ಅಧ್ಯಕ್ಷ ಶ್ರೀ ಯಡಗೆರೆ ಸುಬ್ರಹ್ಮಣ್ಯ ಅವರುಗಳು ಇದ್ದಾರೆ.





ವಿಶೇಷ ತರಬೇತಿ ಕಾರ್ಯಕ್ರಮದ ಪ್ರಾಯೋಗಿಕ ತರಬೇತಿಯಲ್ಲಿ ಶಿಬಿರಾರ್ಥಿಗಳಿಗೆ ಸೌಹಾರ್ದ ಸಹಕಾರಿಗಳಲ್ಲಿ ಆಡಳಿತ ಮಂಡಳಿ ನೋಟೀಸ್ ಸಿದ್ಧಪಡಿಸುವುದು, ಸಭೆ ನಡೆಸುವುದು, ನಡವಳಿಕೆಗಳನ್ನು ಬರೆಯುವುದು, ಸಂಯುಕ್ತ ಸಹಕಾರಿಗೆ ಪತ್ರ ಬರೆಯುವುದು, ಒಂದು ವಿಷಯದ ಬಗ್ಗೆ ಮಾತನಾಡುವುದು, ಸಭೆ ಸಮಾರಂಭಗಳನ್ನು ವ್ಯವಸ್ಥೆ ಮಾಡುವುದು ಇತ್ಯಾದಿ ವಿಷಯಗಳ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು.



ಕೆಮ್ಮಣ್ಣುಗುಂಡಿಯಲ್ಲಿ ನಡೆದ 10 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಇ. ಸ್ಟಾಂಪಿಂಗ್ ಬಗ್ಗೆ ತರಬೇತಿ.

ಅಧ್ಯಯನ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ನಾಡಿ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಶ್ರೀಧರ ಮೂರ್ತಿ ಮಾತನಾಡುತ್ತಿರುವುದು



ಕೆಮ್ಮಣ್ಣುಗುಂಡಿಯಲ್ಲಿ ನಡೆದ 10 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳು.





ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ತಮ್ಮ ತಂಡದ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್‌ರವರನ್ನು ಸನ್ಮಾನಿಸಿದರು.



ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪರವಾಗಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ಹಾಗೂ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್‌ರವರು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್.ಎಸ್. ಮಂಜುನಾಥಗೌಡರನ್ನು ಸನ್ಮಾನಿಸಿದರು.



ನಿರ್ದೇಶಕ ಶ್ರೀ ಹೆಚ್.ಎಸ್. ವಿಶ್ವನಾಥ್‌ರನ್ನು ಸನ್ಮಾನಿಸಲಾಯಿತು.

## ಸಮಾರೋಪ ಸಮಾರಂಭ

ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 26-10-2010 ರಂದು ವ್ಯವಸ್ಥೆ ಮಾಡಲಾಗಿತ್ತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರ ರವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಶ್ರೀ ಆರ್.ಎಸ್.ಮಂಜುನಾಥ ಗೌಡರವರು ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡಿ ಮಾತನಾಡುತ್ತಾ ಈ ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ವ್ಯಾಪಕವಾಗಿ ತನ್ನ ಕಾರ್ಯವನ್ನು ನಿರ್ವಹಿಸಬೇಕಾದರೆ ಈ ಕ್ಷೇತ್ರದ ಎಲ್ಲ ವರ್ಗದ ಜನರಿಗೆ ಸಹಕಾರ ಶಿಕ್ಷಣ ಹಾಗೂ ತರಬೇತಿ ಪ್ರಮುಖಪಾತ್ರವನ್ನು ನಿರ್ವಹಿಸುತ್ತದೆ. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ದಿಸೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಎಂದು ತಿಳಿಸುತ್ತ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಿಗೂ ಒಂದು ಗುರಿಯಿರಬೇಕು ಅದನ್ನು ಸಾಧಿಸುವ ಛಲ ಬೇಕು. ಅದಕ್ಕೆ ತಕ್ಕಂತೆ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುತ್ತಿದ್ದರೆ ಎಲ್ಲವೂ ಸಾಧ್ಯವಾಗುತ್ತದೆ ಎಂದು ತಮ್ಮ ಜೀವನದ ಅನುಭವಗಳ ಉದಾಹರಣೆಯೊಂದಿಗೆ ವಿವರಿಸಿದರು.

## ಅಧ್ಯಯನ ಪ್ರವಾಸ

ಈ ತರಬೇತಿ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಭೇಟಿ ನೀಡಲಾಯಿತು. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ದೇವರಾಜರವರು ಶಿಬಿರಾರ್ಥಿಗಳನ್ನು ಸ್ವಾಗತಿಸಿ ಬ್ಯಾಂಕಿನ ವಿವರ ನೀಡಿದರು. ಸಾಲ ವಿಭಾಗದ ವ್ಯವಸ್ಥಾಪಕ ಶ್ರೀ ಲೋಕೇಶಗೌಡ, ಹಣಕಾಸು ವಿಭಾಗದ ವ್ಯವಸ್ಥಾಪಕ ಶ್ರೀ ರಂಗಪ್ಪನವರು ವಿವರನೀಡಿದರು. ನಂತರ ಚಿಕ್ಕಮಗಳೂರು ಶ್ರೀ ವಾಸವಿ ಸೌಹಾರ್ದ ಸಹಕಾರಿಗೆ ಭೇಟಿ ನೀಡಲಾಯಿತು. ಸಹಕಾರಿಯ ಅಧ್ಯಕ್ಷ ಶ್ರೀ ಶ್ರೀಧರಮೂರ್ತಿ, ಉಪಾಧ್ಯಕ್ಷ ಶ್ರೀಎಸ್.ಎನ್. ರಾಮಣ್ಣ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ರಘುನಂದನರವರು ಸಹಕಾರಿಯ ಕಾರ್ಯ ಚಟುವಟಿಕೆಗಳನ್ನು ಪರಿಚಯಿಸಿದರು.

**ಪ್ರವಾಸಿ ತಾಣಗಳಿಗೆ ಭೇಟಿ :** ಇದರ ಜೊತೆಯಲ್ಲಿ ಕಲ್ಲತ್ತಗಿರಿ ಜಲಪಾತ, ಅಬ್ಬೆ ಜಲಪಾತ, ದತ್ತಪೀಠ, ಮುಳ್ಳಯ್ಯನ ಗಿರಿ ಮುಂತಾದ ಪ್ರವಾಸಿ ತಾಣಗಳಿಗೆ ಭೇಟಿ ನೀಡಲಾಯಿತು.












# ಆದಾಯ ತೆರಿಗೆ ಮತ್ತು ಇತರೆ ಕರ ಕಾಯ್ದೆಗಳ ಬಗ್ಗೆ ಸೌಹಾರ್ದ ಸಹಕಾರಿಗಳು ಗಮನಿಸ ಬೇಕಾದ ಪ್ರಮುಖ ಅಂಶಗಳು

- ಪಾಂಡುರಂಗ ಶಿಂಪಿ

ಅ. ಆದಾಯ ತೆರಿಗೆ: ಎ. ಸಂಕ್ಷಿಪ್ತ ವಿವರಣೆಗಳು :

* ಆದಾಯ ಕರ ಕಾಯ್ದೆ 1961, ಕಲಂ ಸಂಖ್ಯೆ 2(31) ವಿವರಿಸಿದಂತೆ "ವ್ಯಕ್ತಿ" ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ

* ವ್ಯಕ್ತಿಗಳ ಸಮೂಹ ಅಥವಾ ವ್ಯಕ್ತಿಗಳ ಒಕ್ಕೂಟ [ಉದಾಹರಣೆಗೆ ಸಹಕಾರಿ ಸಂಘಗಳು/ ಸೌಹಾರ್ದ ಸಹಕಾರಿಗಳು ಈ ಕಾಯ್ದೆಗೆ ಒಳಪಡುತ್ತವೆ]

* ಕಲಂ ಸಂಖ್ಯೆ 2(19) ವಿವರಿಸಿದಂತೆ "ಸಹಕಾರಿ ಸಂಘಗಳು" ಅಂದರೆ ಯಾವದೇ ಸಹಕಾರಿಯು/ಸಂಘವು ಸಹಕಾರಿ ಕಾಯ್ದೆ 1912 ರಡಿಯಲ್ಲಿ ಯಾವದೇ ರಾಜ್ಯದ ಸಹಕಾರಿ ಸಂಘಗಳ ಕಾಯ್ದೆಯಲ್ಲಿ ನೋಂದಣಿಯಾದ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ

* ಕಲಂ ಸಂಖ್ಯೆ 4 ವಿವರಿಸಿದಂತೆ "ಆದಾಯ ಕರ ಆಕರಣೆ":

1. ಕೇಂದ್ರ ಕಾಯ್ದೆಯಲ್ಲಿ ಜಾರಿಗೆ ಬಂದ ಕಾಯ್ದೆ
2. ಅಸ್ಸೆಸಮೆಂಟ ವರ್ಷದಲ್ಲಿ ಜಾರಿಯಿದ್ದ ನಿರ್ದಿಷ್ಟ ಪಡಿಸಿದ ಕರ ದರದಂತೆ [ಕರ ನಿರ್ಧಾರಣಾ ವರ್ಷ]
3. ಹಿಂದಿನ ಸಾಲಿನ ಆದಾಯದ ಮೇಲೆ
4. ಆದಾಯ ಕರವನ್ನು ಮತ್ತು ಹೆಚ್ಚಿನ ಆದಾಯ ಕರವನ್ನು ಪಾವತಿಸಬೇಕು
5. ಒಟ್ಟು ಆದಾಯ ಕರದಲ್ಲಿ, ಆದಾಯದಲ್ಲಿ ಕಡಿತ [TDS] ಅಥವಾ ಮುಂಗಡ [Advance Tax] ಕಡಿತಗಳಾದರು ಇದ್ದರೆ ಅವುಗಳನ್ನು ವಜಾ ಮಾಡಬೇಕು.

* ಕಲಂ ಸಂಖ್ಯೆ 5 ವಿವರಿಸಿದಂತೆ ಒಟ್ಟು ಆದಾಯದ" ಅಂದರೆ

1. ಭಾರತ ದೇಶದಲ್ಲಿ ಯಾವದೇ ವರ್ಷದಲ್ಲಿ ಪಡೆದ/ ಗಳಿಸಿದ/ಸ್ವೀಕರಿಸಿದ ಅಥವಾ ಪಡೆದ /ಗಳಿಸಿದ/ಸ್ವೀಕರಿಸಿದ ಎಂಬ ನಂಬಬಹುದಾದ ಆದಾಯಗಳು ಇಂಥ ವ್ಯಕ್ತಿಗಳಿಂದ ಅಥವಾ ಅವರ ಪರವಾಗಿ ಬೇರೆ ವ್ಯಕ್ತಿಗಳಿಂದಾ
2. ಭಾರತ ದೇಶದಲ್ಲಿ ಇಂಥ ವರ್ಷದಲ್ಲಿ ಉದ್ಭವವಾದ ಅಥವಾ ಉದ್ಭವವಾದ ಎಂದು ನಂಬಬಹುದಾದ ಆದಾಯಗಳು
3. ಭಾರತ ಬಿಟ್ಟು ಹೊರ ದೇಶದಲ್ಲಿ ಇಂಥ ವರ್ಷದಲ್ಲಿ ಉದ್ಭವವಾದ ಅಥವಾ ಉದ್ಭವವಾದ ಎಂದು ನಂಬ ಬಹುದಾದ ಆದಾಯಗಳು

ಬಿ. ತೆರಿಗೆ ವಿವರ ಇಲಾಖೆಗೆ ಸಲ್ಲಿಸುವುದು : ವಿವರಣೆ 2 ಪ್ರಕರಣ 139(2) ರಲ್ಲಿ ಹೇಳಿರುವಂತೆ

* ಲೆಕ್ಕಪರಿಶೋಧನೆ ಅಗತ್ಯವಿಲ್ಲದ ಸಹಕಾರಿಗಳು: ಕರ ನಿರ್ಧಾರಣಾ ವರ್ಷದ ಜುಲೈ 31 ರ ಒಳಗೆ ರಿಟರ್ನ್ [ತೆರಿಗೆ ವಿವರ] ಸಲ್ಲಿಸಬೇಕು.

* ಲೆಕ್ಕಪರಿಶೋಧನೆ ಅವಶ್ಯವಿದ್ದ ಸಹಕಾರಿಗಳು: ಕರ ನಿರ್ಧಾರಣಾ ವರ್ಷದ ಸಂಪ್ಟೆಂಬರ 30 ರ ಒಳಗೆ ರಿಟರ್ನ್ [ ತೆರಿಗೆ ವಿವರ] ಸಲ್ಲಿಸಬೇಕು.

ಸಿ. ಲೆಕ್ಕಪರಿಶೋಧನೆ ಅವಶ್ಯವಿದ್ದ ಸಹಕಾರಿಗಳು ಪ್ರಕರಣ 44ಎಬಿ: ಪ್ರಕರಣ 44ಎಬಿ ರಲ್ಲಿ ತಿಳಿರುವಂತೆ

ಯಾವದೇ ವ್ಯಕ್ತಿಯ ಒಟ್ಟು ವಾರ್ಷಿಕ ವ್ಯವಹಾರ ರೂ.40 ಲಕ್ಷಗಳು ದಾಟಿದ್ದರೆ, ಅಂಥ ವ್ಯಕ್ತಿಗಳು ತಮ್ಮ ಲೆಕ್ಕಪುಸ್ತಕಳನ್ನು ಚಾರ್ಟರ್ಡ ಅಕೌಂಟಂಟ್ಸ ರಿಂದಾ ಲೆಕ್ಕಪರಿಶೋಧನೆ ಮಾಡಿಸಿ ನಂತರ ಈ ಮೇಲೆ ತಿಳಿಸಿದಂತೆ ಸಂಪ್ಟೆಂಬರ 30 ರ ಒಳಗೆ ರಿಟರ್ನ್ [ ತೆರಿಗೆ ವಿವರ] ಸಲ್ಲಿಸಬೇಕು.

ಡಿ. ಪ್ರಕರಣ ಸಂಖ್ಯೆ44ಎಬಿ ಪಾಲಿಸದೇ ಇದ್ದರೇ: ಪ್ರಕರಣ 44ಎಬಿ ಪಾಲಿಸದಿದ್ದರೆ ಪಕರಣ ಸಂಖ್ಯೆ 271ಬಿ ಪ್ರಕಾರ ವ್ಯಕ್ತಿಯು ಒಟ್ಟು ವ್ಯವಹಾರ್ದ 0.50% ಅಥವಾ ರೂ. 100000/- ಲಕ್ಷ ಯಾವದು ಕಡಿಮೆಯೊ ಅಷ್ಟನ್ನು ದಂಡ ಪಾವತಿ ಮಾಡಬೇಕಾಗುತ್ತದೆ.

ಇ. ಕಾಯ್ದೆ ಪ್ರಕರಣ ಸಂಖ್ಯೆ 139ಎ: ಯಾವದೇ ವ್ಯಕ್ತಿಯು

* ಒಟ್ಟು ವ್ಯವಹಾರ ರೂ.5 ಲಕ್ಷಗಳು ಮೀರಿದ್ದರೆ ಅಥವಾ

* ಒಟ್ಟು ಆದಾಯದ ತೆರಿಗೆ ಮಿತಿ ದಾಟಿದ್ದರೆ ಅವರು PAN CARD ನ್ನು ಹೊಂದಿರಬೇಕು.

* ನಮೂನೆ 49ಎ ನೋಡಿರಿ

ಎಫ್. ಕೆಲವೊಂದು ಖರ್ಚುಗಳು ಲಾಭಹಾನಿ ಖಾತೆಯಲು ಕಳೆಯಲು ಅನರ್ಹವಾಗಿರುತ್ತವೆ. ಪ್ರಕರಣ 40 ರಲ್ಲಿ ತಿಳಿಸಿರುವಂತೆ ಆ ಖರ್ಚುಗಳು ಈ ಕೆಳಗಿನಂತಿವೆ.

1) ಮೂಲದಲ್ಲಿ ತೆರಿಗೆ ಕಡಿತ ಮಾಡದ ಖರ್ಚುಗಳು
2) ಆದಾಯ ತೆರಿಗೆ, ಕೊಸರು ಭತ್ಯೆ ಮತ್ತು ಸೆಕ್ಯುರಿಟೀಜ ಟ್ರಾಂಜೆಕ್ಷನ ತೆರಿಗೆ ಇತ್ಯಾದಿ
3) ಹಿಂದಿನ ಸಾಲಿನಲ್ಲಿ ಆಕರಣೆ ಪದ್ಧತಿಯಲ್ಲಿ ಪರಿಗಣಿಸಿದ ಖರ್ಚುಗಳು ಸದರಿ ಸಾಲಿನಲ್ಲಿ ಪಾವತಿಯಾಗದಿದ್ದರೆ
4) ಶಾಸನಬದ್ಧ ತೆರಿಗೆ ವಿವರ ಸಲ್ಲಿಸುವ ಮೊದಲೆ ಪಾವತಿಯಾಗದಿದ್ದರೆ

ಜಿ. ಕೆಲವೊಂದು ಖರ್ಚುಗಳು ಲಾಭಹಾನಿ ಖಾತೆಯಲು ಕಳೆಯಲು ಅನರ್ಹವಾಗಿರುತ್ತವೆ. ಪ್ರಕರಣ 40ಎ(3) ರಲ್ಲಿ ತಿಳಿಸಿದಂತೆ ಕೆಲವೊಂದು ಖರ್ಚುಗಳು ಬ್ಯಾಂಕ ಕ್ರಾಸ್ಡ ಚೆಕ್ ಅಥವಾ ಡಿಮಾಂಡ ಡ್ರಾಫ್ಟ ಹೊರತಾಗಿ ಪಾವತಿಯಾಗದಿದ್ದರೆ

ಎಚ್. ಕೆಲವೊಂದು ವ್ಯವಹಾರಗಳು ಕ್ರಾಸ್ಡ ಚೆಕ್ ಅಥವಾ ಡಿಮಾಂಡ ಡ್ರಾಫ್ಟ ಮುಖಾಂತರವೇ ಮಾಡಬೇಕು:

10ನೇ ಪುಟಕ್ಕೆ

# SiFiN ಕಾರ್ಯ ಚಟುವಟಿಕೆಗಳು

2. ದಿನಾಂಕ 25-6-2010 ರಂದು ಹರಪನಹಳ್ಳಿ ತಾಲೂಕ ಸೌಹಾರ್ದ ಸಹಕಾರಿ ನಿ. ಹರಪನಹಳ್ಳಿ, ಜಿಲ್ಲಾ ದಾವಣಗೆರೆ ಇವರ ಸಹಯೋಗದೊಂದಿಗೆ ಹೂಡಿಕೆದಾರರ ಸಭೆ ನಡೆಯಿತು.

ಸಭೆಗೆ ಆಗಮಿಸಿದ್ದ ಹೂಡಿಕೆದಾರರಿಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯ ಬಗ್ಗೆ, ನಮ್ಮ ಷೇರು ಮಾರುಕಟ್ಟೆಯ ಮೇಲೆ ಪ್ರಪಂಚದ ಇತರ ದೇಶದ ಆರ್ಥಿಕ ವ್ಯವಸ್ಥೆಗಳಿಂದಾಗುವ ಪರಿಣಾಮದ ಬಗ್ಗೆ, ಮುಂದಿನ ದಿನಗಳಲ್ಲಿ ಷೇರು ಮಾರುಕಟ್ಟೆಯ ಸ್ಥಿತಿಗಳ ಬಗ್ಗೆ ನಮ್ಮ ಸಂಸ್ಥೆಯ ಅಧ್ಯಕ್ಷರು ಮತ್ತು ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮನೋಹರ ಮಸ್ಕಿಯವರು ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ UTI ಮ್ಯುಚುವಲ್ ಫಂಡಿನ ದಾವಣಗೆರೆ ಬ್ರ್ಯಾಂಚ್‌ನ ಮುಖ್ಯ ಅಧಿಕಾರಿಗಳಾದಂತಹ ಶ್ರೀ ಶರಣಬಸವೇಶ್ವರ ಇವರು ಮ್ಯುಚುವಲ್ ಫಂಡ ಬಗ್ಗೆ ಬಹಳಷ್ಟು ಮಾಹಿತಿಯನ್ನು ನೀಡಿದರು. ಈ ಹೂಡಿಕೆದಾರರ ಸಭೆಯ ಅಧ್ಯಕ್ಷತೆಯನ್ನು ಹರಪನಹಳ್ಳಿ ತಾಲೂಕ ಸೌಹಾರ್ದ ಸಹಕಾರಿ ನಿ, ಅಧ್ಯಕ್ಷರು ಮತ್ತು ನಿರ್ದೇಶಕರಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರಿನ ಶ್ರೀ ಅಂಬ್ಲಿ ಮಂಜುನಾಥ ವಹಿಸಿದ್ದರು.







1. ದಿನಾಂಕ 1-6-2010 ರಂದು ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿಯಮಿತ, ಕೊಪ್ಪ, ಜಿಲ್ಲಾ- ಚಿಕ್ಕಮಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಷೇರು ಹೂಡಿಕೆದಾರರಿಗೆ ಮಾಹಿತಿ ಮತ್ತು ಸಂವಾದ ಕಾರ್ಯಕ್ರಮ ಸಭೆಯಲ್ಲಿ ಷೇರು ಮಾರುಕಟ್ಟೆಯ ಬಗ್ಗೆ ವಿಸ್ತೃತವಾಗಿ ನಮ್ಮ ಸಂಸ್ಥೆಯ ಅಧ್ಯಕ್ಷರು ಮತ್ತು ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮನೋಹರ ಮಸ್ಕಿಯವರು ಹೂಡಿಕೆದಾರರಿಗೆ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಿಂದ ಲಾಭಗಳಿಸುವ ರೀತಿ ನೀತಿಗಳು,ಜಾಗತಿಕ ಮಾರುಕಟ್ಟೆಯ ಪರಿಣಾಮಗಳು ಮತ್ತು ಉತ್ಕೃಷ್ಟ ಕಂಪನಿ ಷೇರುಗಳನ್ನು ಹುಡುಕಿ ಹೂಡಿಕೆ ಮಾಡುವ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು.

ಇನ್ನೊಂದು ಮುಖ್ಯ ಹೂಡಿಕೆಯ ವೇದಿಕೆಯಾಗಿರುವಂತಹ ಮ್ಯೂಚುವಲ್ ಫಂಡ್ ಬಗ್ಗೆ ಮಾಹಿತಿ ನೀಡಲು ಬೆಂಗಳೂರಿನಿಂದ IDBI ಮ್ಯೂಚುವಲ್ ಫಂಡಿನ ಹಿರಿಯ ಅಧಿಕಾರಿಗಳಾದ ಶ್ರೀ ವೆಂಕಟೇಶ ಅವರು ಆಗಮಿಸಿ ಮ್ಯುಚುವಲ್ ಫಂಡ್‌ಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ಈ ಸಭೆಯ ಅಧ್ಯಕ್ಷತೆಯನ್ನು ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿಯಮಿತ, ಅಧ್ಯಕ್ಷರಾದ ಶ್ರೀ ವೈ. ಎಸ್. ಸುಬ್ರಮಣ್ಯ ಇವರು ವಹಿಸಿದ್ದರು ಮತ್ತು ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಅಪೆಕ್ಸ್ ಬ್ಯಾಂಕ ನಿರ್ದೇಶಕರು ಶ್ರೀ ರಾಮಸ್ವಾಮಿ ಎಸ್. ಎನ್., ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ನಿರ್ದೇಶಕರಾದ ಶ್ರೀ ವಿಶ್ವನಾಥ್ ಎಸ್. ಎನ್., ರಾಜ್ಯ ಯೋಜನಾ ಆಯೋಗದ ಸದಸ್ಯರಾದ ಶ್ರೀ ಜಿ.ಎಸ್.ಮಹಾಬಲ, ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಅಪರೇಟಿವ್ ನಿಯಮಿತ, ಉಪಾಧ್ಯಕ್ಷರಾದ ಶ್ರೀ ಎಲ್.ಡಿ.ನವೀನ್ ಆಗಮಿಸಿದ್ದರು.

## ಸಹಕಾರಿಯ ಯಶೋಗಾಥೆ

### ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿ ಅಭಿವೃದ್ಧಿ ಪಥದಲ್ಲಿರುವ

# ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ



ಸಿದ್ಧರಾಮಪ್ಪ ಮಾಡಶಿರವಾರ
ಅಧ್ಯಕ್ಷರು



ಬಿ.ರಾಜಶೇಖರ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ರಾಜ್ಯದ ಪ್ರಮುಖ ಪತ್ತಿನ ಸೌಹಾರ್ದ ಸಹಕಾರಿಗಳಲ್ಲೊಂದಾದ ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯು ಲಭ್ಯವಿರುವ ಎಲ್ಲ ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿ ಸಂಪೂರ್ಣ ಗಣಕೀಕರಣಗೊಂಡು ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಪ್ರಗತಿಪಥದಲ್ಲಿ ಸಾಗಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಹೆಮ್ಮೆ.

ಈ ಸಹಕಾರಿಯು ಆರಂಭದಿಂದಲೂ ಲಾಭದಲ್ಲಿ ಮುನ್ನಡೆಯುವ ಜೊತೆಗೆ ಪ್ರತಿವರ್ಷ ತನ್ನ ಸದಸ್ಯರಿಗೆ ಹೆಚ್ಚಿನ ಲಾಭಾಂಶವನ್ನು ಕೊಡುತ್ತ ಬಂದಿರುವುದು ಈ ವಿಶೇಷ. ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ರಾಯಚೂರು,ಕೊಪ್ಪಳ ಬಳ್ಳಾರಿ ಹಾಗೂ ಕಲಬುರ್ಗಿ ಕಾರ್ಯವ್ಯಾಪ್ತಿ ಹೊಂದಿರುವ ಈ ಸಹಕಾರಿಯು ಸಿಂಧನೂರು,ಸಿರವಾರ, ಪೋತ್ನಾಳ ಹಾಗೂ ಕಂಪ್ಲಿಯಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ಸದಸ್ಯರ ಆರ್ಥಿಕ ಅನುಕೂಲಕ್ಕಾಗಿ ಹೊಸಹೊಸ ಯೋಜನೆಗಳನ್ನು ಜಾರಿಮಾಡುವುದರ ಜೊತೆಗೆ ಸ್ಪರ್ಧಾತ್ಮಕ ದರದಲ್ಲಿ ಸಾಲಗಳನ್ನು ನೀಡುತ್ತಿದೆ, ಠೇವಣಿಗಳಿಗೆ ಗರಿಷ್ಠ ಪ್ರಮಾಣದ ಬಡ್ಡಿಯನ್ನು ನೀಡುತ್ತಿದೆ. ಸದಸ್ಯರ ಅನುಕೂಲಕ್ಕಾಗಿ ಕಳೆದ ಹಲವಾರು ವರ್ಷಗಳಿಂದ ರೂ 50,000 ವರೆಗೆ ವಿಮೆ ಸೌಲಭ್ಯವನ್ನು ನೀಡುತ್ತಿರುವ ರಾಜ್ಯದ ಮೊದಲ ಸಹಕಾರಿಯಾಗಿದೆ.

ಈ ಸಹಕಾರಿಯಲ್ಲಿ 1,00,39,000 ಶೇರು ಬಂಡವಾಳವಿದ್ದು 2,34,10,491 ರೂಗಳ ವಿವಿಧ ಪ್ರಕಾರದ ನಿಧಿಗಳಿವೆ. 1,86,0200 ಗಳ ಸಾಲ ನೀಡಲಾಗಿದೆ. 14755373 ರೂಗಳ ಹೂಡಿಕೆಗಳಿವೆ. 10,000 ಕ್ಕೂ ಹೆಚ್ಚು ಸದಸ್ಯತ್ವವಿರುವ ಈ ಸಹಕಾರಿಯಲ್ಲಿ 100 ಕೋಟಿಗೂ ಹೆಚ್ಚು ವಾರ್ಷಿಕ ವ್ಯವಹಾರವಿರುವುದು ಗಮನಾರ್ಹ ವಿಷಯ. 2008ರಲ್ಲಿ ನಡೆದ ಸಹಕಾರಿ ಸಪ್ತಾಹದ ಸಂದರ್ಭದಲ್ಲಿ ಗುಲ್ಬರ್ಗಾ ವಿಭಾಗದ ಅತ್ಯುತ್ತಮ ಸಹಕಾರಿಯೆಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಕ್ರಿಯಾಶೀಲ ಅಧ್ಯಕ್ಷ ಶ್ರೀ ಸಿದ್ಧರಾಮಪ್ಪ ಮಾಡಶಿರವಾರ, ಉಪಾಧ್ಯಕ್ಷ ಶ್ರೀ ಸಿಂಹಾದ್ರಿ ಸತ್ಯನಾರಾಯಣ, ನಿರ್ದೇಶಕರುಗಳಾಗಿ ಶ್ರೀ ಅಮರೇಗೌಡ ವಿರುಪಾಪುರ, ಶ್ರೀ ರಾಘಣ್ಣ.ಇ. ಶ್ರೀ ರುದ್ರಗೌಡ ಪಿ.ಶ್ರೀ ಚಾಂದಸಾಬ್, ಶ್ರೀ ಜಯಂತಿಲಾಲ ಜೈನ, ಶ್ರೀ ಪಂಪನಗೌಡ ಮಾಲೀಪಾಟೀಲ,ಶ್ರೀ ಪಾಟೀಲ ವಿ.ಎನ್.ಶ್ರೀ ಶಿವಪ್ಪ ಚಲವಾದಿ,ಶ್ರೀಮತಿ ಲೀಲಾವತಿ ಎಂ.ಆರ್. ಕಾರ್ಯನಿರ್ವಹಿಸುತ್ತಿದ್ದಾರೆ.

ಒಬ್ಬ ದಕ್ಷ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಬಿ.ರಾಜಶೇಖರ ಹಾಗೂ ಅವರಿಗೆ ಸಹಕಾರಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿವರ್ಗವನ್ನು ಈ ಸಹಕಾರಿಯು ಹೊಂದಿರುವುದು ಈ ಸಹಕಾರಿಯು ಅಭಿವೃದ್ಧಿ ಪಥದಲಿ. ಇದೊಂದು ಮಾದರಿ ಹಾಗೂ ಅನುಕರಣೀಯ ಸಹಕಾರಿಯಾಗಿದೆ.

Swabhimani Sahakari, Monthly, Posted
at Wilson Garden Post Office 560027, Posting Day 8th
Reg. No. RNP/BGS/2094/2008-10 Licence to post
RNI Ref: KARBILO1214/10/1/2002-TC

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ - 23

## ಮಿತಭಾಷಿ, ಕ್ರೀಯಾಶೀಲ ಯುವ ಸಹಕಾರಿ

# ಶ್ರೀ ಶ್ರೀಕಾಂತ ಬಾಳಕೃಷ್ಣ ಹತನೂರೆ

ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗಳಿಗೆ ಹೆಸರು ಬೆಳಗಾವಿ ಜಿಲ್ಲೆ. ರಾಜ್ಯದಲ್ಲಿ ವೈವಿಧ್ಯಮಯ ವಿಶಿಷ್ಟ ರೀತಿಯ ಸಹಕಾರಿ ಸಂಸ್ಥೆಗಳಿಗೆ ಹುಟ್ಟುಹಾಕಿದ ಜಿಲ್ಲೆ. ಈ ಜಿಲ್ಲೆಯಲ್ಲಿ ಅನೇಕ ಸಹಕಾರಿ ಗಣ್ಯರು ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸೇವೆ ಸಲ್ಲಿಸಿದ್ದಾರೆ. ಅವರುಗಳ ಸಾಲಿಗೆ ಸೇರುತ್ತಾರೆ ಕ್ರೀಯಾಶೀಲ ಯುವ ಸಹಕಾರಿ ನಾಯಕ ಶ್ರೀ ಶ್ರೀಕಾಂತ ಹತನೂರೆಯವರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಮಂಡಳಿಯಲ್ಲಿ ವಿಶೇಷ ಆಹ್ವಾನಿತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಬೆಳಗಾವಿ ಜಿಲ್ಲೆಯ ಪ್ರಸಿದ್ಧ ಸಹಕಾರಿ ಮುಖಂಡ ಶ್ರೀ ಬಾಳಕೃಷ್ಣ ಹತನೂರೆಯವರ ಸುಪುತ್ರರು. ಚಿಕ್ಕೋಡಿ ಜಿಲ್ಲೆಯ ಶ್ರೀ ಶಂಕರಲಿಂಗ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಭಿವೃದ್ಧಿಯಲ್ಲಿ ತಂದೆಯವರೊಂದಿಗೆ ಸಂಪೂರ್ಣ ನೆರವು ಸಹಾಯ ಸಹಕಾರ ನೀಡುತ್ತ ಸಹಕಾರಿಯ ಅಭಿವೃದ್ಧಿಯಲ್ಲಿ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ.



ವೃತ್ತಿಯಲ್ಲಿ ವ್ಯಾಪಾರಿಯಾಗಿರುವ ಶ್ರೀಯುತರು 15-07-1965 ರಲ್ಲಿ ಶಂಕರಲಿಂಗದಲ್ಲಿ ಜನಿಸಿ ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಪಿ.ಯು.ಸಿ. ನಂತರ ವ್ಯಾಪಾರ ಹಾಗೂ ಸಾರ್ವಜನಿಕ ಜೀವನ ಇವರನ್ನು ಬರಮಾಡಿಕೊಂಡಿತು.

1996-97 ರಲ್ಲಿಯೇ ಸಂಕೇಶ್ವರ ನಗರ ಸಭಾ ಸದಸ್ಯರಾಗಿ , ಸ್ಟಾಂಡಿಂಗ ಕಮೀಟಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1998 ರಿಂದ 2002 ರವರೆಗೆ ಸಂಕೇಶ್ವರ ನಗರ ಸಭಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಶಂಕರಲಿಂಗ ಹೌಸಿಂಗ್ ಸಹಕಾರಿ ಸಂಘವನ್ನು ಹುಟ್ಟುಹಾಕಿ ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2002 ರಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾಯಿತ ಸದಸ್ಯರಾಗಿ ಆಯ್ಕೆಯಾಗಿದ್ದ ಶ್ರೀಯುತರು ನಂತರದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ವಿಶೇಷ ಆಹ್ವಾನಿತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರಳ ಸ್ವಭಾವದ ಸದಾ ಹಸನ್ಮುಖಿಯಾಗಿರುವ ಶ್ರೀಯುತರು ಮಿತಭಾಷಿ. ಸಹಕಾರ ಕ್ಷೇತ್ರದ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ಬಲವಾಗಿ ನಂಬಿದ್ದಾರೆ. ಯುವಕರು ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ತಿಳುವಳಿಕೆ ಮಾಡಿಕೊಂಡು ಕ್ರಿಯಾಶಿಲರಾಗಿ ಕಾರ್ಯನಿರ್ವಹಿಸಿದಲ್ಲಿ ಸಹಕಾರಿ ಕ್ಷೇತ್ರ ಬಲವಾಗಿ ಬೆಳೆಯುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

## ಉತ್ತಮ ಯುವ ಸಹಕಾರಿ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಸುಶ್ರೂತಿ ಸೌಹಾದ ಸಹಕಾರಿ ಕ್ಷೇತ್ರದ ಅಧ್ಯಕ್ಷ ಶ್ರೀ ಜಿ.ಪುರುಷೋತ್ತಮ B.A, PGDCA, ADCA,MCA ಪಧವಿಧರರು. ಸಹಕಾರ ಕ್ಷೇತ್ರದ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ನಂಬಿದವರಲ್ಲಿ ಒಬ್ಬರು. ಖಾಸಗಿ ಕಂಪನಿ ಹಾಗೂ ಬ್ಯಾಂಕುಗಳಲ್ಲಿ ಕೆಲಸಗಳು ಬಂದಿದ್ದವಾದರೂ ಅವುಗಳಲ್ಲಿ ಹೆಚ್ಚಿನ ಆಸಕ್ತಿ ತೋರದೆ ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಎಲ್ಲ ಕೆಲಸಗಳನ್ನು ಬಿಟ್ಟು ಸಹಕಾರಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವ ಈ ಯುವ ಸಹಕಾರಿ ಮುಖಂಡ ಉತ್ತಮ ಕ್ರಿಯಾಶೀಲ ಸಹಕಾರಿಯೆನಿಸಿದ್ದಾರೆ. ಸೌಹಾರ್ದ ಸಹಕಾರಿ ಯುವ ಸಹಕಾರಿ ಪಡೆಯಲ್ಲಿ ಸಕ್ರೀಯವಾಗಿ ಗುರುತಿಸಿಕೊಂಡಿದ್ದಾರೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ವಿಷಯಗಳ ಬಗ್ಗೆ ಚರ್ಚಿಸಿ ವಿಷಯಗಳನ್ನು ಅರಿತುಕೊಂಡು ಕಾರ್ಯನಿರ್ವಹಿಸುವ ಸ್ವಭಾವವನ್ನು ರೂಢಿಸಿಕೊಂಡಿದ್ದಾರೆ.

2007ರಲ್ಲಿ ಪ್ರಾರಂಭವಾಗಿರುವ ಇವರ ಸೌಹಾರ್ದ ಸಹಕಾರಿಯಲ್ಲಿ 1075 ಕ್ಕೂ ಹೆಚ್ಚು ಸದಸ್ಯರಿದ್ದು 29.46 ಲಕ್ಷ ಶೇರು ಬಂಡವಾಳವಿದೆ. "ಇ"ಸ್ಟಾಂಪಿಂಗ್



ಶ್ರೀ ಜಿ. ಪುರುಷೋತ್ತಮ
ಅಧ್ಯಕ್ಷರು, ಸುಶ್ರುತಿ ಸೌಹಾರ್ದ ಸಹಕಾರಿ
ಬೆಂಗಳೂರು

ಸೇವೆಯನ್ನು ಪ್ರಾರಂಭಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

"ಸಾಧನೆ ಸಾಧಕನ ಸ್ವತ್ತೆ ಹೊರತು, ಸೋಮಾರಿಯ ಸ್ವತ್ತಲ್ಲ. ಸಾಧಕ ಸಹಕಾರಿಗಳು ಕಷ್ಟಪಟ್ಟು ಕೆಲಸ ಮಾಡಬಾರದು, ಇಷ್ಟಪಟ್ಟು ಕೆಲಸಮಾಡಬೇಕು. ಕೆಲಸದ ಆನಂದವನ್ನು ಅನುಭವಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ.ಸ್ವಾಭಿಮಾನಿ ಸಹಕಾರಿ ಬಳಗವು ಈ ಯುವ ಸಹಕಾರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸುತ್ತದೆ.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್.ಆರ್.ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ.ಕಾರಕೂನ | 9482734077 |

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು- 560 002
ಸಂಪಾದಕ, ಪ್ರಕಾಶಕ: ಶ್ರೀ ಶರಣಗೌಡ ಪಾಟೀಲ, ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ವಿ.ಜಿ.ಕಾರಕೂನ